ಮೂಲ ದಾವಾ ಸಂಖ್ಯೆ. 82/2015 ಡಿ ಡಬ್ಲ್ಯೂ 3

(ದಿನಾಂಕ 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದಃ-

ಈ ದಾವೆಯನ್ನು ಸಣ್ಣದುರುಗಪ್ಪ ಇವರು ಆಸ್ತಿಯ ವಿಚಾರಕ್ಕಾಗಿ ಎದುರು ಪಾರ್ಟಿಯ ಮೇಲೆ ದಾವೆ ದಾಖಲಿಸಿದ್ದಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಆ ಆಸ್ತಿ ಸರ್ವೆ ನಂ.140 ಸಿ/1 ಇರುತ್ತದೆ. ಸದರಿ ಆಸ್ತಿಯ ಕುರಿತು ಖರೀದಿ ಪತ್ರ, ಪಹಣಿ, ಹಳೇ ಪಹಣಿ, ಡಯಾಗ್ಲಾಟ್ ಮತ್ತು ಇಸಿ ಗಳನ್ನು ನಾನು ನೋಡಿಲ್ಲ ನನಗೆ ಸರ್ವೆ ನಂಬರ್ ಮಾತ್ರ ಗೊತ್ತು. ಸದರಿ ಆಸ್ತಿಯು ಮೂಲತಃ ಬೈಲಪ್ಪ ಇವರ ಹೆಸರಿನಲ್ಲಿತ್ತು. ನಾನು ಸದರಿಯವರ ಹೆಸರಿನಲ್ಲಿ ಸನ್ 1990 ನೇ ಇಸ್ವಿಯಲ್ಲಿ ಆಸ್ತಿ ದಾಖಲಿರುವ ಬಗ್ಗೆ ದಾಖಲೆ ನೋಡಿದ್ದೇನೆ ನಂತರ ಏನಾಗಿದೆ ಎನ್ನುವುದರ ಬಗ್ಗೆ ನನಗೆ ಗೊತ್ತಿಲ್ಲ . ಸನ್ 1955 ರಲ್ಲಿ ಬೈಲಪ್ಪ ಮತ್ತು ಅವನ ಅಣ್ಣನ ಹೆಂಡತಿ ಗಂಗಮ್ಮ ಇವರು ಸದರಿ ಆಸ್ತಿಯನ್ನು ಪೋಲೀಸ್‌ಗೌಡ ಭೀಮನಗೌಡ ಪಾಟೀಲ್ ಇವರಿಗೆ ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ದಿಃ 31-12-1979 ರಂದು ಸದರಿ ಆಸ್ತಿಯನ್ನು ಪೋಲೀಸ್‌ಗೌಡ ಭೀಮನಗೌಡ ಪಾಟೀಲ್ ಇವರು ವಾದಿಯ ದೊಡ್ಡಪ್ಪ ಚಿನಗಾರ್ ರಾಮಣ್ಣ ಇವರಿಗೆ ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಸನ್ 2010 ರಲ್ಲಿ ವಾದಿ ಮತ್ತು ಅವರ ದೊಡ್ಡಪ್ಪ ಪಾಲುವಿಭಾಗ ಮಾಡಿಕೊಂಡಿದ್ದು ದಾವಾಸ್ತಿಯ ಪಹಣಿ ಸನ್ 2010 ರಿಂದ ವಾದಿಯ ಹೆಸರಿಗೆ ದಾಖಲಾಗಿದೆ ಎಂದರೆ ಸಾಕ್ಷಿಯು ಅವರು ಯಾವ ರೀತಿ ದಾಖಲು ಮಾಡಿಸಿಕೊಂಡರೆಂದು ನನಗೆ ಗೊತ್ತಿಲ್ಲ ಆದರೆ ಅದು ಬೈಲಪ್ಪನವರ ಹೆಸರಿನಲ್ಲಿರುವುದು ಮಾತ್ರ ನನಗೆ ಗೊತ್ತು ಸದರಿ ಜಮೀನಿನಲ್ಲಿ ಪ್ರತಿವಾದಿ ಸ್ವಾಧೀನದಲ್ಲಿದ್ದು ಅವರು ಹೇಗೆ ಮಾಡಿಸಿಕೊಳ್ಳುತ್ತಾರೆನ್ನುತ್ತಾರೆ. ಪ್ರತಿವಾದಿಯರು ಸದರಿ ಜಮೀನಿನಲ್ಲಿ ಸ್ವಾಧೀನದಲ್ಲಿರುವುದಿಲ್ಲ ಸನ್ 1955 ರ ಕ್ರಯಪತ್ರದಂತೆ ಪೋಲೀಸ್‌ಗೌಡ ಭೀಮನಗೌಡ ಪಾಟೀಲ್ ಮತ್ತು ಸನ್ 1979 ರ ಖರೀದಿ ಪತ್ರದಂತೆ ವಾದಿಯ ದೊಡ್ಡಪ್ಪ ನಂತರ 2010 ರಿಂದ ವಾದಿಯು ಸದರಿ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾನೆಂದರೆ ಸರಿಯಲ್ಲ.

ದಾವಾ ಜಮೀನನ್ನು ಅಳತೆ ಮಾಡಲು ಈಗ ಸುಮಾರು 2-3 ವರ್ಷದ ಹಿಂದೆ ಸರ್ವೆಯವರು ಮತ್ತು ಜಿಲ್ಲೇದಾರ್ ಬಂದಿದ್ದರು ನಿಖರವಾದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಸದರಿ ಸರ್ವೆ ಕಾರ್ಯಕ್ಕೆ ಬರುವ ಪೂರ್ವದಲ್ಲಿ ಅಕ್ಕಪಕ್ಕದ ಜಮೀನಿನವರಿಗೆ ನೋಟೀಸನ್ನು ಕೊಟ್ಟಿದ್ರಾ ಅಥವಾ ಜಮೀನು ಪಹಣಿಯಲ್ಲಿರುವವ ಹೆಸರಿಗೆ ನೋಟೀಸೇನಾದರೂ ಕೊಟ್ಟಿದ್ರಾ ಎಂದರೆ ಸಾಕ್ಷಿಯು ನನಗೆ ನೋಟೀಸ್ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ ಸರ್ವೆಗೆ

ಮೂಲ ದಾವಾ ಸಂಖ್ಯೆ. 82/2015 ಡಿ ಡಬ್ಲ್ಯೂ 3

ಬಂದಿದ್ದರು ನನಗೆ ಪಂಚನಾಮೆಗೆ ಕರೆದುಕೊಂಡು ಹೋಗಿದ್ದರು ಎನ್ನುತ್ತಾರೆ. ಸರ್ವೆಗೆ ಬಂದಿರುವ ಅಧಿಕಾರಿಗಳ ಹೆಸರು ನನಗೆ ಗೊತ್ತಿಲ್ಲ, ಸರ್ವೆಗೆ ಬಂದಿದ್ದರು ಫೋಟೋಗಳನ್ನು ತೆಗೆದರು, ಮಾಹಿತಿ ಕೇಳಿದರು 50-60 ಜನರಿದ್ದರು ಎನ್ನುತ್ತಾರೆ. ನನಗೆ ಸರ್ವೆ ಇಲಾಖೆಯವರು ಸರ್ವೆ ಕಾರ್ಯಕ್ಕೆ ಬರುವಂತೆ ನೋಟೀಸ್ ಕೊಟ್ಟಿಲ್ಲ. ಪ್ರತಿವಾದಿಯು ಸರ್ವೆ ನಕಾಶೆ ಮತ್ತು ಫೋಟೋಗಳನ್ನು ಸೃಷ್ಟಿ ಮಾಡಿದ್ದು ಅದಕ್ಕೆ ಅನುಕೂಲವಾಗುವ ರೀತಿಯಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈಗಲೂ ಸಹಾ ದಾವಾಸ್ತಿಯಲ್ಲಿ ಪ್ರತಿವಾದಿಯರು ಸ್ವಾಧೀನದಲ್ಲಿರುತ್ತಾರಂತಾ ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ.

ದಾವಾ ಜಮೀನಿನ ಹತ್ತಿರ ನನ್ನ ಜಮೀನು ಸರ್ವೆ ನಂ.81 ಮತ್ತು 82 ಇರುತ್ತದೆ. ಅದರ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾಸ್ತಿಯ ಚಕ್ಕುಬಂದಿ ಪೂಃಗಂಗಾಧರ ಸ್ವಾಮಿ, ಪಃಹುಲಿಗೆಮ್ಮ, ಉಃಗಿಡ್ಡಜ್ಜ ಮತ್ತು ಸೋಮೇಶ ಮತ್ತು ದಃ ರವಿಕುಮಾರ್ ಇರುತ್ತಾರೆ. ನಾನು ಹೇಳಿರುವ ಚಕ್ಕುಬಂದಿ ದಾವಾಸ್ತಿಯ ಚಕ್ಕುಬಂದಿ ಇರುವುದಿಲ್ಲವೆಂದರೆ ಸರಿಯಲ್ಲ. ದಾವಾ ಜಮೀನು ಯಾರು ಸಾಗು ಮಾಡುತ್ತಾರೆನ್ನುವುದು ನನಗೆ ಗೊತ್ತಿಲ್ಲ ಆದ್ದರಿಂದ ನನಗೆ ದಾವಾ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಯರು ಮತ್ತು ನಾವು ಆತ್ಮೀಯರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ